KARNATAKA THANDA
CIN No. U93000KA2009SGC049213

# ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸೈರಾಬಾಗ್, ನಂ.19/4, 2ನೇ ಮಹಡಿ, ಕನ್ನಿಂಗ್ ಹ್ಯಾಂರೋಡ್, ಬೆಂಗಳೂರು-52
ಕಛೇರಿ ದೂರವಾಣಿ:080-22285561, 62, 63, 64
E-mail: ktdclit@gmail.com. websit: www.banjarathanda.kar.nic.in

ಸಂಖ್ಯೆ:ಕತಾಅನಿನಿ/ಎ-5/ಸಿ.ಆರ್.14/ಮಂ.ವಿ.ಕೋ/ಗಂ.ಕ.ಯೋ/2018-19 ದಿನಾಂಕ:28.06.2020

## ಕಛೇರಿ ಆದೇಶ

ವಿಷಯ: ಕಂದಾಯ ಗ್ರಾಮ ರಚನೆಗೆ ಹೊರಡಿಸಿರುವ ಅಧಿಸೂಚನೆಯಂತೆ ಸರ್ಕಾರಿ ಜಮೀನಿನಲ್ಲಿ ವಾಸವಾಗಿರುವ ಬಂಜಾರ ಕುಟುಂಬಗಳ ಮನೆಗಳನ್ನು ಸಕ್ರಮಗೊಳಿಸಲು ಸಲ್ಲಿಸಿರುವ ನಮೂನೆ-3ಸಿ ಅರ್ಜಿಗಳಿಗೆ ಕುರಿತು.

ಉಲ್ಲೇಖ: 1.ನಿಗಮದ ಸುತ್ತೋಲೆ ಸಮಸಂಖ್ಯೆ: 2171, ದಿನಾಂಕ: 19.08.2019.
2.40ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ವಿಷಯ ಸಂಖ್ಯೆ:07, ದಿನಾಂಕ: 07.11.2019.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಲಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಜಮೀನಿನಲ್ಲಿ ವಾಸವಾಗಿರುವ ತಾಂಡಾಗಳ ಮನೆಗಳನ್ನು ಸಕ್ರಮಗೊಳಿಸಲು ನಿವಾಸಿಗಳಿಂದ ನಮೂನೆ 3ಸಿ ಭರ್ತಿ ಮಾಡಿಸಿ ತಹಶೀಲ್ದಾರ್ ರವರಿಗೆ ಸಲ್ಲಿಸುವುದಾಗಿದೆ. ಸರ್ಕಾರದ ಅದೇಶದನ್ವಯ ತಾಂಡಾವನ್ನು ಕಂದಾಯ ಗ್ರಾಮ/ಗ್ರಾಮ ಠಾಣಾವನ್ನಾಗಿಸಲು ಅಧಿಸೂಚನೆ ಹೊರಡಿಸಿದ ನಂತರ ಸರ್ಕಾರಿ ಜಮೀನಿನಲ್ಲಿ ನೆಲೆಗೊಂಡಿರುವ ತಾಂಡಾಗಳ ದಾಖಲೆ ರಹಿತ ವಾಸದ ಮನೆಗಳ ನಿವಾಸಿಗಳು ನಮೂನೆ-3ಸಿಯನ್ನು ಭರ್ತಿ ಮಾಡಿ ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರ್ ರವರಿಗೆ ಸಲ್ಲಿಸುವುದಾಗಿರುತ್ತದೆ. ಉಲ್ಲೇಖ(1) ಮತ್ತು (2)ರ ಪ್ರಕಾರ ದಾಖಲೆ ರಹಿತ ಜನವಸತಿ ಪ್ರದೇಶಗಳಲ್ಲಿ ವಾಸವಾಗಿರುವ ತಾಂಡಾದ ನಿವಾಸಿಗಳು ಅವರ ವಾಸದ ಮನೆ ಮತ್ತು ಅದಕ್ಕೆ ಹೊಂದಿಕೊಂಡಿರುವ ಉಪಭೋಗದ ಜಾಗವನ್ನು ನಮೂನೆ-3ಸಿ ಅಲ್ಲಿ ಭರ್ತಿ ಮಾಡಿ ತಹಶೀಲ್ದಾರ್ ರವರಿಗೆ ಸಲ್ಲಿಸಲು ಅನುಕೂಲವಾಗುವಂತೆ ನಿಗಮದ ಸಂಪನ್ಮೂಲ ವ್ಯಕ್ತಿಗಳು ಮತ್ತು ತಾಂಡಾ ವಿಕಾಸ ಸಮಿತಿಯ ಸಂಚಾಲಕರ ಸಹಾಯ ಪಡೆಯಲು ಸೂಚಿಸಲಾಗಿದೆ. ದಾಖಲೆ ರಹಿತ ಮನೆಗಳ ಮತ್ತು ಅದಕ್ಕೆ ಲಗತ್ತಾದ ಉಪಭೋಗದ ಜಾಗದ ಅಂದಾಜು ಅಳತೆ ಮಾಡಿ ನಮೂನೆ-3ಸಿಯನ್ನು ತ್ರಿ-ಪ್ರತಿಯಲ್ಲಿ ಭರ್ತಿ ಮಾಡಿ ಮನೆಗಳ ನಿವಾಸಿಗಳಿಗೆ ಸಹಾಯ ಸಹಕಾರ ನೀಡುವ ಸಂಚಾಲಕರಿಗೆ ಪ್ರತಿ ಮನೆಗೆ ತಲಾ ರೂ.15/-ರಂತೆ ಪಾವತಿಸಲು ಅವಕಾಶ ಮಾಡಿಕೊಡಲಾಗಿದೆ.

ಅದರಿಂದ ಈ ಆದೇಶದೊಂದಿಗೆ ಲಗತ್ತಿಸಲ್ಲಾದ ವಲಯ ವ್ಯಾಪ್ತಿಯಲ್ಲಿ ಬರುವ ತಾಂಡಾಗಳ ಪಟ್ಟಿಯಲ್ಲಿ ಕಾಣಿಸಿರುವ ಸರ್ಕಾರಿ ಜಮೀನಿನಲ್ಲಿ ನೆಲೆಗೊಂಡಿರುವ ತಾಂಡಾಗಳ ದಾಖಲೆ ರಹಿತ ವಾಸದ ಮನೆಗಳ ನಿವಾಸಿಗಳಿಂದ ನಮೂನೆ-3ಸಿಯನ್ನು ಸಂಬಂಧಿಸಿದ ತಾಲ್ಲೂಕಿನ ಸಂಪನ್ಮೂಲ ವ್ಯಕ್ತಿ ಮತ್ತು ತಾಂಡಾ ವಿಕಾಸ ಸಮಿತಿಯ ಸಂಚಾಲಕರು ಭರ್ತಿ ಮಾಡಿಸಿ ಅವುಗಳನ್ನು ಸಂಬಂಧಿಸಿದ ತಾಲ್ಲೂಕಿನ ತಹಶೀಲ್ದಾರ್ ರವರಿಗೆ ನಿಗದಿತ ಅವಧಿಯಲ್ಲಿ ಸಲ್ಲಿಸಿದ ಮತ್ತು ಸಲ್ಲಿಸಬೇಕಾಗಿರುವ ನಮೂನೆಗಳನ್ನು ಸಲ್ಲಿಸಿ ಕಛೇರಿ ಮೊಹರುನೊಂದಿಗೆ ಸ್ವೀಕೃತಿ

ಪಡೆದು ವಲಯ ಕಛೇರಿಗೆ ಪ್ರತಿಯನ್ನು ಕಳುಹಿಸಲು ಸೂಚಿಸಲು ತಿಳಿಸಿದೆ. ಸಂಪನ್ಮೂಲ ವ್ಯಕ್ತಿಯಿಂದ, ತಹಶೀಲ್ದಾರ್ ಕಛೇರಿಯ ಸ್ವೀಕೃತಿಯನ್ನು ಪಡೆದ ನಂತರ ಅವುಗಳ ಜೆರಾಕ್ಸ್ ಪ್ರತಿ ಮಾಡಿ ಒಂದು ಪ್ರತಿಯನ್ನು ವಲಯ ಕಛೇರಿಯಲ್ಲಿ ಇಟ್ಟುಕೊಂಡು ಮತ್ತೊಂದನ್ನು ನಿಗಮದ ಕೇಂದ್ರ ಕಛೇರಿಗೆ ಕಳುಹಿಸಲು ತಿಳಿಸಿದೆ. ಸಂಪನ್ಮೂಲ ವ್ಯಕ್ತಿ ಮತ್ತು ತಾಂಡಾ ವಿಕಾಸ ಸಮಿತಿಯ ಸಂಚಾಲಕರು ಕಾರ್ಯ ನಿರ್ವಹಿಸಿದ ಪ್ರಕಾರ ಪ್ರತಿ ಮನೆಯ ನಮೂನೆ-3ಸಿ ಸಲ್ಲಿಸಿದ ಅಧಾರದ ಮೇಲೆ ತಲಾ ರೂ.15/-ರಂತೆ ಲೆಕ್ಕ ಹಾಕಿ ಅವರುಗಳ ಹೆಸರಿನಲ್ಲಿ ಬಿಲ್ಲು ಸಿದ್ಧಪಡಿಸಿ ಕೇಂದ್ರ ಕಛೇರಿಗೆ ಕಳುಹಿಸಬೇಕಾಗಿದ್ದು ಈ ಕಾರ್ಯವನ್ನು 15 ದಿವಸದೊಳಗಾಗಿ ಪೂರ್ಣಗೊಳಿಸಲು ಆದೇಶಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ವ್ಯವಸ್ಥಾಪಕ ನಿರ್ದೇಶಕರು

ಗೆ,

1.ಎಲ್ಲಾ ವಲಯ ಅಭಿವೃದ್ಧಿ ಅಧಿಕಾರಿಗಳಿಗೆ ತುರ್ತು ಕ್ರಮಕ್ಕಾಗಿ.
2.ಲೆಕ್ಕ ಶಾಖೆ.
3.ಕಂದಾಯ ಗ್ರಾಮ ಪರಿವರ್ತನೆ ಕಾರ್ಯವನ್ನು ಹಂಚಿಕೆ ಮಾಡಲಾದ ನಿಗಮದ ಸಿಬ್ಬಂದಿಗಳಿಗೆ ಸೂಕ್ತ ಕ್ರಮಕ್ಕಾಗಿ.
4.ಕಛೇರಿ ಪ್ರತಿ.